# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 986

ಸದಸ್ಯರ ಹೆಸರು : ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 14.03.2025.

ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಗ್ರಾಮ ಪಂಚಾಯಿತಿ ಸಿಬ್ಬಂದಿ, ಇತರ ಅಧಿಕಾರಿಗಳು ಹಾಗೂ ಜನ ಪ್ರತಿನಿಧಿಗಳು ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಮನವಿಗಳನ್ನು ಸಲ್ಲಿಸುತ್ತಿದ್ದು ಮತ್ತು ವಿವಿಧ ರೀತಿಯಲ್ಲಿ ಪ್ರತಿಭಟನೆಯನ್ನು ಆಗಾಗ ಮಾಡುತ್ತಿದ್ದು, ಈ ಕುರಿತು ಇಲಾಖೆ ಇಲ್ಲಿಯವರೆಗೆ ಯಾವ ರೀತಿಯಲ್ಲಿ ಕ್ರಮವಹಿಸಿದೆ; ಈ ರೀತಿಯ ಸಮಸ್ಯೆಗಳ ಪರಿಹಾರಕ್ಕಾಗಿ ಯಾವ ಕ್ರಮಗಳನ್ನು ರೂಪಿಸಿದೆ; (ಬೇಡಿಕೆವಾರು ವಿವರ ನೀಡುವುದು) | ವಿವರಗಳನ್ನು ಅನುಬಂಧದಲ್ಲಿ ನೀಡಿದೆ. |
| (ಆ) | ಗ್ರಾಮ ಪಂಚಾಯಿತಿಗಳ ಸಿಬ್ಬಂದಿಗಳು ಬಡ್ತಿ ಹೊಂದಿ ಮತ್ತು ನಿವೃತ್ತರಾಗಿ ತೆರವಾಗುವ ಹುದ್ದೆಗಳನ್ನು ಭರ್ತಿ ಮಾಡಲು ಇಲ್ಲಿಯವರೆಗೆ ಇಲಾಖೆ ಯಾವ ಕ್ರಮವಹಿಸಿದೆ; ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಖಾಲಿಯಿರುವ ಗ್ರಾಮ ಪಂಚಾಯಿತಿ ಸಿಬ್ಬಂದಿ ಹುದ್ದೆಗಳ ಸಂಖ್ಯೆ ಎಷ್ಟು; | ಗ್ರಾಮ ಪಂಚಾಯಿತಿಗಳ ಸಿಬ್ಬಂದಿಗಳು ಬಡ್ತಿ ಹೊಂದಿ ಮತ್ತು ನಿವೃತ್ತರಾಗಿ ತೆರವಾಗುವ ಹುದ್ದೆಗಳನ್ನು ಭರ್ತಿ ಮಾಡಲು ದಿನಾಂಕ:28.06.2024 ರ ಪತ್ರದಲ್ಲಿ ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. ಆಯಾ ಜಿಲ್ಲಾ ಪಂಚಾಯತಿಗಳ ಹಂತದಲ್ಲಿ ಈ ಕುರಿತು ಕ್ರಮ ವಹಿಸಲಾಗುತ್ತಿದ್ದು, ಇದೊಂದು ನಿರಂತರ ಪ್ರಕ್ರಿಯೆಯಾಗಿರುತ್ತದೆ.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 886 ಗ್ರಾಪಂಕಾ 2016 ದಿನಾಂಕ:29.09.2020 ರಲ್ಲಿ ಗ್ರಾಮ ಪಂಚಾಯತಿ ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ ಪ್ರತಿ ಗ್ರಾಮ ಪಂಚಾಯತಿಯ ಹುದ್ದೆಗಳ ಸಂಖ್ಯೆಯನ್ನು ಪತ್ಯೇಕವಾದ ಸರ್ಕಾರಿ ಆದೇಶದಲ್ಲಿ ಒದಗಿಸುವುದಾಗಿ ತಿಳಿಸಿದ್ದು ಈ ಕುರಿತು ಪರಿಶೀಲನೆಯಲ್ಲಿರುತ್ತದೆ. |
| (ಇ) | ಗ್ರಾಮ ಪಂಚಾಯಿತಿಗಳ ಸಿಬ್ಬಂದಿ ಮಾದರಿಯು ಮೊದಲಿನಂತೆಯೇ ಇದ್ದು, ಇಲಾಖೆಯ ಕೆಲಸದ ಜೊತೆಗೆ ಇತರ ಇಲಾಖೆಗಳ ಕೆಲಸಗಳನ್ನು ಗ್ರಾಮ ಪಂಚಾಯಿತಿಯು ನಿರ್ವಹಿಸುತ್ತಿದ್ದು, ಸೃಷ್ಟಿಯಾಗಿರುವ ಹೆಚ್ಚುವರಿ ಕಾರ್ಯದೊತ್ತಡವನ್ನು | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993, ದಿನಾಂಕ:10-05-1993 ರಿಂದ ಜಾರಿಗೆ ಬಂದಿರುತ್ತದೆ. ಆ ಸಮಯದಲ್ಲಿ ಗ್ರಾಮ ಪಂಚಾಯತಿಯಲ್ಲಿ ರಾಜ್ಯ ಸಿವಿಲ್ ಸೇವೆಗೆ ಸೇರಿದ ಗ್ರಾಮ ಪಂಚಾಯತಿ ಕಾರ್ಯದರ್ಶಿ (ಗ್ರೇಡ್-1/ ಗ್ರೇಡ್-2) ವೃಂದದ ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದರು.<br><br>ಪ್ರಸ್ತುತ ರಾಜ್ಯದ ಗ್ರಾಮ ಪಂಚಾಯತಿಗಳಲ್ಲಿ ರಾಜ್ಯ ಸಿವಿಲ್ ಸೇವೆಗೆ ಸೇರಿದ ಪಂಚಾಯತಿ ಅಭಿವೃದ್ಧಿ ಅಧಿಕಾರಿ, |

| | | |
|---|---|---|
| | ನಿಭಾಯಿಸಲು ಇಲಾಖೆ ಯಾವ ಕ್ರಮ ವಹಿಸಿದೆ; | ಗ್ರಾಮ ಪಂಚಾಯತಿ ಕಾರ್ಯದರ್ಶಿ (ಗ್ರೇಡ್-1/ ಗ್ರೇಡ್-2) ಮತ್ತು ಹೆಚ್ಚಿನ ಆರ್ಥಿಕ ಮತ್ತು ಆಡಳಿತಾತ್ಮಕ ಜವಾಬ್ದಾರಿಯುಳ್ಳ ಗ್ರಾಮ ಪಂಚಾಯತಿಗಳಲ್ಲಿ ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.<br><br>ಮೇಲ್ಕಂಡ ರಾಜ್ಯ ಸಿವಿಲ್ ಸೇವೆಗೆ ಸೇರಿದ ನೌಕರರ ಜೊತೆಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 112ರಡಿ ಸಿಬ್ಬಂದಿ ವರ್ಗದ ಮಾದರಿಯಲ್ಲಿ ಮಂಜೂರಾಗಿರುವ 1) ಬಿಲ್ ಕಲೆಕ್ಟರ್, 2) ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್, 3) ವಾಟರ್ ಆಪರೇಟರ್ 4) ಅಟೆಂಡೆಂಟ್ ಮತ್ತು 5)ಕ್ಲೀನರ್ಸ್ ವೃಂದದಲ್ಲಿ ನೌಕರರು ಗ್ರಾಮ ಪಂಚಾಯತಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. |
| (ಈ) | ಕರ್ನಾಟಕ ರಾಜ್ಯದಲ್ಲಿ ಗ್ರಾಮ ಪಂಚಾಯಿತಿಗಳ ತೆರಿಗೆ ಮೂಲವನ್ನು ಹೆಚ್ಚಿಸುವ ಮತ್ತು ವಸೂಲಿ ಮಾಡುವ ಬಗ್ಗೆ ಸುಧಾರಣಾ ಕ್ರಮಗಳೇನು; ರಾಜ್ಯದ ವಿವಿಧ ಜಿಲ್ಲೆಗಳ ನಡುವೆ ತೆರಿಗೆ ಮೂಲ ಹೆಚ್ಚಳ ಮತ್ತು ಶೇಕಡಾವಾರು ವಸೂಲಿ ಅಂಕಿ ಅಂಶಗಳ ನಡುವೆ ಅಗಾಧ ವ್ಯತ್ಯಾಸವಿರಲು ಕಾರಣಗಳೇನು; | ರಾಜ್ಯದಲ್ಲಿ ಗ್ರಾಮ ಪಂಚಾಯಿತಿಗಳ ತೆರಿಗೆ ಮೂಲವನ್ನು ಹೆಚ್ಚಿಸುವ ಮತ್ತು ವಸೂಲಿ ಮಾಡಲು ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿದೆ.<br><br>• ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 199 (1) ರನ್ವಯ ಗ್ರಾಮ ಪಂಚಾಯಿತಿಗಳು ಆಸ್ತಿಗಳ ಬಂಡವಾಳ ಮೌಲ್ಯದ ಮೇಲೆ ನಿಯಮಗಳನ್ವಯ ತೆರಿಗೆಗಳನ್ನು ವಿಧಿಸಲು ಅವಕಾಶ ಕಲ್ಪಿಸಿದೆ.<br><br>• ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ತೆರಿಗೆ, ದರ ಮತ್ತು ಫೀಜುಗಳು) ನಿಯಮಗಳು, 2021 ರಲ್ಲಿ ನಿವೇಶನ, ವಸತಿ ಕಟ್ಟಡ, ವಾಣಿಜ್ಯ, ವಸತಿಯೇತರ ಕಟ್ಟಡ, ಕೃಷಿ ಆಧಾರಿತ ಉತ್ಪಾದನಾ ಕಟ್ಟಡಗಳು, ಕೈಗಾರಿಕೆಗಳು, ಅಪಾರ್ಟ್‌ಮೆಂಟ್, ಫ್ಲಾಟ್, ವಿಲ್ಲಾಮೆಂಟ್, ಟೆನಮೆಂಟ್, ಬಹುಮಾಲಿಕತ್ವದ ಕಟ್ಟಡಗಳಿಗೆ ತೆರಿಗೆ ವಿಧಿಸಲು ಪ್ರತ್ಯೇಕ ದರಗಳನ್ನು ನೀಡಲಾಗಿರುತ್ತದೆ.<br><br>• ಕರ್ನಾಟಕ ಗ್ರಾಮ ಸ್ವರಾಜ್ ಮತ್ತುಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 199-ಎ ರನ್ವಯ ಗ್ರಾಮ ಪಂಚಾಯಿತಿಗಳು 199 ನೇ ಪ್ರಕರಣದ ಅಡಿಯಲ್ಲಿ ವಿಧಿಸಬಹುದಾದ ತೆರಿಗೆಗಳನ್ನು ಕನಿಷ್ಟ ಎರಡು ವರ್ಷಗಳಿಗೊಮ್ಮೆ ಹಾಗೂ ನೊಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿ ದರಗಳನ್ವಯ ಪರಿಷ್ಕರಿಸಲು ಅವಕಾಶ ಕಲ್ಪಿಸಿದೆ.<br><br>• ತೆರಿಗೆ ವಸೂಲಾತಿಗಾಗಿ ಗ್ರಾಮ ಪಂಚಾಯಿತಿಯ ಆಸ್ತಿಗಳ ಮಾನ್ಯುಯಲ್ ಸಮೀಕ್ಷೆ ನಡೆಸಲಾಗುತ್ತಿದೆ.<br><br>• ನಿಯಮಗಳನ್ವಯ ನಿಖರವಾದ ಮತ್ತು ವೈಜ್ಞಾನಿಕವಾಗಿ ತೆರಿಗೆ ಲೆಕ್ಕಾಚಾರ ಮತ್ತು ವಹಿಗಳ ನಿರ್ವಹಣೆಗೆ ಪಂಚತಂತ್ರ 2.0 ತಂತ್ರಾಂಶವನ್ನುಅನುಷ್ಠಾನಗೊಳಿಸಲಾಗಿದೆ.<br><br>• ತೆರಿಗೆಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ರ ನಿಯಮ 19 ರನ್ವಯ ನಗದು, ಚೆಕ್, ಡಿ.ಡಿ, ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್, ನೆಟ್ ಬ್ಯಾಂಕಿಂಗ್, |

| | | |
|---|---|---|
| | | ಯು.ಪಿ.ಐ, ಮೊಬೈಲ್ ವಾಲೆಟ್ ಮೂಲಕ ವಸೂಲಾತಿ/ ಪಾವತಿಗಾಗಿ ಬಳಕೆಗೆ ಅವಕಾಶ ಕಲ್ಪಿಸಿದೆ.<br><br>• ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 200 ರನ್ವಯ ತೆರಿಗೆ ಬಾಕಿ ವಸೂಲಾತಿಗೆ ವಹಿಸಬೇಕಾದ ಕ್ರಮಗಳನ್ನು ತಿಳಿಸಲಾಗಿರುತ್ತದೆ.<br><br>• ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 199 (1) ರನ್ವಯ ಗ್ರಾಮ ಪಂಚಾಯಿತಿಗಳು ಆಸ್ತಿಗಳ ಬಂಡವಾಳ ಮೌಲ್ಯದ ಮೇಲೆ ನಿಯಮಗಳನ್ವಯ ತೆರಿಗೆಗಳನ್ನು ವಿಧಿಸಲು ಅವಕಾಶ ಕಲ್ಪಿಸಿದ್ದು, ಸದರಿ ನಿಯಮಗಳ ನಿಯಮ15 ರನ್ವಯ ಆಸ್ತಿಗಳ ಬಂಡವಾಳ ಮೌಲ್ಯವನ್ನು ಕರ್ನಾಟಕ ನೊಂದಣಿ ಮತ್ತು ಮುದ್ರಾಂಕ ಇಲಾಖೆಯು ಕರ್ನಾಟಕ ಮುದ್ರಾಂಕ ಅಧಿನಿಯಮ 1957 ರ 45ಬಿ ಪ್ರಕರಣದಡಿ ಪ್ರಕಟಿಸಲಾದ ಮಾರ್ಗಸೂಚಿದರಗಳನ್ವಯ ಪಡೆಯಬೇಕಾಗಿರುತ್ತದೆ. ಇದರಿಂದ ರಾಜ್ಯದ ಜಿಲ್ಲೆಗಳ/ತಾಲ್ಲೂಕು/ಗ್ರಾಮಗಳ ಮಾರ್ಗಸೂಚಿ ದರಗಳಲ್ಲಿ ವ್ಯತ್ಯಾಸಗಳಿರುವುದರಿಂದ ತೆರಿಗೆಗಳ ವಿಧಿಸುವಿಕೆಯಲ್ಲಿ ವ್ಯತ್ಯಾಸಗಳಿರುತ್ತವೆ.<br><br>ಪ್ರಸ್ತುತ ಸಾಲಿನ ಅಂದರೆ, 2024-25 ನೇಸಾಲಿನ ಚಾಲ್ತಿ ಬೇಡಿಕೆ 1592.48 ಕೋಟಿ ಇದ್ದು, ಫೆಬ್ರುವರಿ 2025 ರ ಅಂತ್ಯಕ್ಕೆ 1146.01 ಕೋಟಗಳ ತೆರಿಗೆಸಂಗ್ರಹಣೆ ಆಗಿದ್ದುಶೇ. 72 ರಷ್ಟು ತೆರಿಗೆ ಸಂಗ್ರಹವಾಗಿರುತ್ತದೆ.<br><br>ಬೇಡಿಕೆಗೆ ಅನುಗುಣವಾಗಿಶೇ. 100 ರಷ್ಟು ತೆರಿಗೆ ಸಂಗ್ರಹ ಮಾಡಲು ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ನಿರ್ದೇಶನ ನೀಡಲಾಗಿದೆ. |
| (ಉ) | ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ತೆರಿಗೆ ಮೂಲ ಹೆಚ್ಚಳವಾಗದಿರಲು ಮತ್ತು ತೆರಿಗೆ ವಸೂಲಿ ಕುಂಠಿತವಾಗಲು ಕಾರಣವಾಗುವ ಅಂಶಗಳನ್ನು ಗುರುತಿಸಿ ಸುಧಾರಿಸಲು ಏನು ಕ್ರಮವಹಿಸಿದೆ? (ಜಿಲ್ಲಾವಾರು ಮಾಹಿತಿ ನೀಡುವುದು) | ಗ್ರಾಮ ಪಂಚಾಯಿತಿಗಳಲ್ಲಿ ಮ್ಯಾನ್ಯುಯಲ್ ಸಮೀಕ್ಷೆ ಪೂರ್ವದಲ್ಲಿ ಒಟ್ಟು 1,35,12,332 ಆಸ್ತಿಗಳಿದ್ದು, ಮ್ಯಾನ್ಯುಯಲ್ ಸಮೀಕ್ಷೆ ನಂತರ ಒಟ್ಟು 1,43,34,534 ಆಸ್ತಿಗಳು ಕಂಡು ಬಂದಿದ್ದು ಒಟ್ಟು 8,22,202 ಆಸ್ತಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿರುತ್ತದೆ. ತೆರಿಗೆ ಮೊತ್ತ 1406.42 (2023-24) ಕೋಟಿ ರೂಗಳಿಂದ1592.48 (2024-25) ಕೋಟಿ ರೂಗಳಷ್ಟು ಇದ್ದು, ಒಟ್ಟು ₹.186.06ಕೋಟಿ ರೂಗಳಷ್ಟು ತೆರಿಗೆ ಹೆಚ್ಚಳವಾಗಿರುತ್ತದೆ.<br><br>ಪ್ರಸ್ತುತ 2024-25 ನೇ ಸಾಲಿನ ಚಾಲ್ತಿ ಬೇಡಿಕೆ 1592.48 ಕೋಟಿ ರೂಗಳಿದ್ದು, ಫೆಬ್ರುವರಿ 2025 ರ ಅಂತ್ಯಕ್ಕೆ 1146.01 ಕೋಟಿ ರೂಗಳ ತೆರಿಗೆ ಸಂಗ್ರಹಣೆ ಆಗಿದ್ದುಶೇ. 72 ರಷ್ಟು ತೆರಿಗೆ ಸಂಗ್ರಹವಾಗಿರುತ್ತದೆ.<br><br>ಬೇಡಿಕೆಗೆ ಅನುಗುಣವಾಗಿ ಶೇ. 100 ರಷ್ಟು ತೆರಿಗೆ ಸಂಗ್ರಹ ಮಾಡಲು ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ನಿರ್ದೇಶನ ನೀಡಲಾಗಿದೆ. |

ಸಂಖ್ಯೆ: ಗ್ರಾಅಪ 202 ಗ್ರಾಪಂಅ 2025

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

## ಅನುಬಂಧ-4

### ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಬೇಡಿಕೆಗಳು :-

| ಕ್ರ. ಸಂ. | ಬೇಡಿಕೆ | ಕೈಗೊಂಡಿರುವ ಕ್ರಮ |
|---|---|---|
| 1 | ಏಳು ವರ್ಷ ಪೂರೈಸಿ ಕರ್ತವ್ಯ ನಿರ್ವಹಿಸುತ್ತಿರುವ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಬೇರೆ ತಾಲೂಕಿಗೆ ವರ್ಗಾವಣೆ ಮಾಡುವ ನಿಯಮವನ್ನು ಕೈಬಿಡುವುದು ಹಾಗೂ ಜಿಲ್ಲೆಯಿಂದ ಬೇರೆ ಜಿಲ್ಲೆಗೆ ಇಚ್ಛೆ ಇಲ್ಲದ್ದಿದರೂ ಸಾರ್ವಜನಿಕ ಹಿತಾಸಕ್ತಿ ಎಂದು ತೋರಿಸಿ ವರ್ಗಾವಣೆ ಮಾಡಬಾರದು ಮತ್ತು ವರ್ಗಾವಣೆ ನಿಯಮಗಳಲ್ಲಿ ಯಾವುದೇ ಬದಲಾವಣೆಗೆ ಮುನ್ನ ಸಂಘದ ಸಲಹೆಯನ್ನು ಪಡೆಯುವುದು.<br><br>ಕಡ್ಡಾಯ ನಿರೀಕ್ಷಣೆಯಲ್ಲಿರುವ ಪಂ.ಅ.ಅ/ಕಾರ್ಯದರ್ಶಿಗಳಿಗೆ ಕೆಲವು ಜಿಲ್ಲೆಗಳಲ್ಲಿ ವೇತನ ಪಾವತಿಸಿರುವುದಿಲ್ಲ. | ಪರಿಶೀಲನೆಯಲ್ಲಿರುತ್ತದೆ.<br><br>ಸ್ಥಳ ನಿರೀಕ್ಷಣೆಯಲ್ಲಿದ್ದ ಪಂ.ಅ.ಅ / ಕಾರ್ಯದರ್ಶಿಗಳಿಗೆ ಸ್ಥಳ ನಿಯುಕ್ತಿಗೊಳಿಸಿದ ನಂತರ ನಿಗಧಿತ ಸಮಯದೊಳಗಾಗಿ ವೇತನ ಪಾವತಿಸುವ ಕುರಿತು ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳಿಗೆ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ದಿ: 27.11.2024 ರ ಪತ್ರದಲ್ಲಿ ನಿರ್ದೇಶನವನ್ನು ನೀಡಲಾಗಿರುತ್ತದೆ. |
| 2 | ರಾಜ್ಯದ ಎಲ್ಲಾ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಹುದ್ದೆಯನ್ನು **ಗೆಜೆಟೆಡ್ ಗ್ರೂಪ್ "ಬಿ"** ದರ್ಜೆಗೆ ಉನ್ನತೀಕರಿಸುವುದು. ಇದಕ್ಕಾಗಿ ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆಯಾಗುವುದಿಲ್ಲ. | ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ ಇವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಮಿತಿಯಲ್ಲಿ ಈ ಬೇಡಿಕೆಯು ಪರಿಶೀಲನೆಯಲ್ಲಿರುತ್ತದೆ. |
| 3 | ಈಗಾಗಲೇ ಹಿಂಪಡೆಯಲಾಗಿರುವ 2007-08 ರಿಂದ 2011-12 ನೇ ಸಾಲಿನ ನರೇಗಾ ಲೋಕಾಯುಕ್ತ ಪ್ರಕರಣವನ್ನು ಶಾಶ್ವತವಾಗಿ ಮುಕ್ತಾಯಗೊಳಿಸಿ ಲೋಕಾಯುಕ್ತಕ್ಕೆ ಮಾಹಿತಿ ನೀಡುವುದು. | ಪರಿಶೀಲನೆಯಲ್ಲಿರುತ್ತದೆ. |
| 4 | ಗ್ರಾಮ ಪಂಚಾಯತಿಗೆ ಅಗತ್ಯವಿರುವ ಕಾರ್ಯದರ್ಶಿಗಳು, ಲೆಕ್ಕ ಸಹಾಯಕರು ಹಾಗೂ ಅಗತ್ಯವಿದ್ದಷ್ಟು ಗ್ರಾಮ ಪಂಚಾಯತ್ ಸಿಬ್ಬಂದಿಗಳನ್ನು ನೇಮಕ ಮಾಡುವುದು. | ಒಟ್ಟು 247 ಪಂಚಾಯತಿ ಅಭಿವೃದಿ ಅಧಿಕಾರಿಗಳ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕೆ.ಪಿ.ಎಸ್.ಸಿ ಯಿಂದ ದಿನಾಂಕ: 17.09.2024 ರಂದು ಅಧಿಸೂಚನೆ ಹೊರಡಿಸಲಾಗಿದ್ದು, ಹೈದರಾಬಾದ್ - ಕರ್ನಾಟಕ ಸ್ಥಳೀಯ ವೃಂದದ 97 ಹುದ್ದೆಗಳಿಗೆ ದಿ; 16.11.2024 ಮತ್ತು 17.11.2024 ರಂದು ಹಾಗೂ ಉಳಿಕೆ ಮೂಲ ವೃಂದದ 150 ಹುದ್ದೆಗಳ ನೇಮಕಾತಿಗಾಗಿ ದಿ: 07.12.2024 ಮತ್ತು 07.12.2024 ರಂದು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲಾಗಿದ್ದು, ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |

| | | |
|---|---|---|
| | | ಖಾಲಿ ಇರುವ ಗ್ರೇಡ್-1 ಗ್ರಾಮ ಪಂಚಾಯತಿ ಕಾರ್ಯದರ್ಶಿ, ಗ್ರೇಡ್-2 ಗ್ರಾಮ ಪಂಚಾಯತಿ ಕಾರ್ಯದರ್ಶಿ ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಹುದ್ದೆಗಳ ನೇಮಕಾತಿಗಾಗಿ ಕೆ.ಪಿ.ಎಸ್.ಸಿ.ಯಿಂದ ಅಧಿಸೂಚನೆ ಹೊರಡಿಸಲು ಬಾಕಿ ಇರುತ್ತದೆ<br><br>ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ದಿನಾಂಕ:18.11.2023 ರ ಆದೇಶದಲ್ಲಿ ವಾಟರ್ ಆಪರೇಟರ್, ಅಟೆಂಡರ್ ಹಾಗೂ ಸ್ವಚ್ಛತಾಗಾರರಿಗೆ ದಿನಾಂಕ:31.10.2027 ಕ್ಕೆ ಹಿಂದೆ ನೇಮಕಗೊಂಡು ಕನಿಷ್ಟ ವಿದ್ಯಾರ್ಹತೆ ಹೊಂದಿಲ್ಲದ ಕಾರಣಕ್ಕೆ ಅನುಮೋದನೆಗಾಗಿ ಬಾಕಿ ಇರುವ ಸಿಬ್ಬಂದಿಗಳಿಗೆ ಕನಿಷ್ಟ ವಿದ್ಯಾರ್ಹತೆಯನ್ನು ಹೊರತುಪಡಿಸಿ ಅನುಮೋದನೆ ನೀಡಿ ಆದೇಶಿಸಲಾಗಿದ್ದು, ಆಯಾ ಜಿಲ್ಲಾ ಪಂಚಾಯತಿಗಳ ಹಂತದಲ್ಲಿ ಕ್ರಮವಹಿಸಲಾಗುತ್ತಿದೆ.<br><br>ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ಆದೇಶ ದಿನಾಂಕ:16.03.2024 ರಲ್ಲಿ ದಿನಾಂಕ:31.10.2017 ಕ್ಕೆ ಹಿಂದೆ ನೇಮಕಗೊಂಡು ಎಲ್ಲಾ ದಾಖಲೆಗಳು ಸರಿ ಇದ್ದು ಜಿಲ್ಲಾ ಪಂಚಾಯತಿಯಿಂದ ಅನುಮೋದನೆ ಬಾಕಿ ಇರುವ ಸಿಬ್ಬಂದಿಗಳಿಗೆ ಅನುಮೋದನೆ ನೀಡಲು ಆದೇಶಿಸಲಾಗಿದ್ದು, ಆಯಾ ಜಿಲ್ಲಾ ಪಂಚಾಯತಿಗಳ ಹಂತದಲ್ಲಿ ಕ್ರಮವಹಿಸಲಾಗುತ್ತಿದೆ.<br><br>ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ದಿನಾಂಕ: 26.06.2024 ರಂದು ಎಲ್ಲಾ ಜಿಲ್ಲೆಗಳ ಮು.ಕಾ.ನಿ.ಅ.ಗಳಿಗೆ ನಿರ್ದೇಶನ ನೀಡಲಾಗಿದ್ದು, ಆಯಾ ಜಿಲ್ಲಾ ಪಂಚಾಯತಿಗಳ ಹಂತದಲ್ಲಿ ಕ್ರಮವಹಿಸಲಾಗುತ್ತಿದೆ.<br><br>ದಿನಾಂಕ: 31.10.2017 ಕ್ಕಿಂತ ಪೂರ್ವದಲ್ಲಿ ಗ್ರಾಮ ಪಂಚಾಯತಿಗಳಲ್ಲಿ ನೇಮಕಗೊಂಡು ಜಿ.ಪಂ, ಮು.ಕಾ.ನಿ.ಅ. ರವರಿಂದ ನೇಮಕಾತಿಗೆ ಅನುಮೋದನೆ ಪಡೆಯದೆ ಮರಣ ಹೊಂದಿದ ನೌಕರರ ಕುಟುಂಬಕ್ಕೆ ಅನುಕಂಪದ ಆಧಾರದ ಮೇಲೆ ನೌಕರಿಯನ್ನು ನೀಡುವ ಬಗ್ಗೆ ದಿನಾಂಕ 18.11.2023 ರಲ್ಲಿ ಎಲ್ಲಾ ಜಿ.ಪಂ, ಮು.ಕಾ.ನಿ.ಅ. ಗಳಿಗೆ ನಿರ್ದೇಶನ ನೀಡಲಾಗಿದ್ದು, ಆಯಾ ಜಿಲ್ಲಾ ಪಂಚಾಯತಿಗಳ ಹಂತದಲ್ಲಿ ಕ್ರಮವಹಿಸಲಾಗುತ್ತಿದೆ. |

| | | |
|---|---|---|
| | | |
| 5 | ಪಂಚಾಯತ ಅಭಿವೃದ್ಧಿ ಅಧಿಕಾರಿಗಳ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಬೇಕು. | ಪಂಚಾಯತ ಅಭಿವೃದ್ಧಿ ಅಧಿಕಾರಿಗಳ ಜೇಷ್ಠತಾ ಪಟ್ಟಿಯ ಕುರಿತು ಪ್ರಕರಣ ಘನ ನ್ಯಾಯಾಲಯದಲ್ಲಿ ಇರುತ್ತದೆ. ಪ್ರಕರಣ ಇತ್ಯರ್ಥವಾದ ಕೂಡಲೇ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ಕ್ರಮ ವಹಿಸಲಾಗುವುದು. |
| 6 | ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಇತರೆ ಇಲಾಖೆಯಲ್ಲಿರುವ ಸಮಾನಾಂತರ ಹುದ್ದೆಗಳಿಗೆ ನಿಯೋಜನೆ ಮೇಲೆ ಹೋಗಲು ಒಟ್ಟು ಮಂಜೂರಾದ ಹುದ್ದೆಗಳಲ್ಲಿ 10% ಹುದ್ದೆಗಳಿಗೆ ಅನುಮತಿ ನೀಡುವುದು. | ಈಗಾಗಲೇ, ಬಹಳಷ್ಟು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಸಮನಾಂತರ ಹುದ್ದೆಗಳಲ್ಲಿ ನಿಯೋಜನೆ ಮೇಲೆ ಹೋಗಿರುತ್ತಾರೆ. ಇಲಾಖೆಯಲ್ಲಿ ಬಹಳಷ್ಟು ಪಂ.ಅ.ಅ ಹುದ್ದೆಗಳು ಖಾಲಿ ಇರುವುದರಿಂದ ಪರಿಗಣಿಸುವುದು ಸೂಕ್ತವಾಗಿರುವುದಿಲ್ಲ. |
| 7 | ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಪ್ರಯಾಣ ಭತ್ಯೆ ಹೆಚ್ಚಳ ಮಾಡುವುದು. | ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ಪತ್ರ ಸಂಖ್ಯೆ. ಕೆಪಿಆರ್‌ಸಿ-ಜಿಪಿಎ/ಪಿಡಿಒ/268/2024 ದಿನಾಂಕ: 27.01.2025 ರಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಪ್ರಯಣ ಭತ್ಯೆ ನೀಡುವ ಕುರಿತು ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. |

**<u>ಗ್ರೇಡ್-1 ಕಾರ್ಯದರ್ಶಿಗಳ ಬೇಡಿಕೆ:</u>**

| ಕ್ರ.ಸಂ | ಬೇಡಿಕೆ | |
|---|---|---|
| 1 | ಗ್ರೇಡ್ -1 ಕಾರ್ಯದರ್ಶಿಗಳ ವೃಂದದ ಜೇಷ್ಠತಾ ಪಟ್ಟಿಯನ್ನು ತುರ್ತಾಗಿ ಪ್ರಕಟಣೆ ಮಾಡಿ, ಪಿ.ಡಿ.ಒ ವೃಂದಕ್ಕೆ ಮುಂಬಡ್ತಿ ನೀಡುವ ಬಗ್ಗೆ ಆಯುಕ್ತರಿಗೆ ಸರ್ಕಾರದ ನಿರ್ದೇಶನವಿದ್ದರೂ, ಮುಂಬಡ್ತಿ ನೀಡದೆ ನಿರಾಸಕ್ತಿ ವಹಿಸುತ್ತಿರುವುದು ಸಾವಿರಕ್ಕೂ ಅಧಿಕ ವಿವಿಧ ವೃಂದದ ನೌಕರರು ಮುಂಬಡ್ತಿಯಿಂದ ವಂಚಿತರಾಗಿದ್ದು ಕಾಲಮಿತಿಯೊಳಗೆ ಮುಂಬಡ್ತಿಗೆ ಕ್ರಮವಹಿಸಲು ಕೋರುತ್ತೇವೆ. | ಆಯುಕ್ತಾಲಯದ ಪತ್ರ ಸಂಖ್ಯೆ. ಕೆಪಿಆರ್‌ಸಿ-ಜಿಪಿಎ/162/2024 ದಿನಾಂಕ: 31.12.2024 ರಲ್ಲಿ ಈ ಕುರಿತು ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದೆ.<br>2025ನೇ ಸಾಲಿಗೆ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಎಲ್ಲಾ 31 ಜಿಲ್ಲೆಗಳ ಹಂತದಲ್ಲಿ ಪ್ರಕಟಿಸಲಾಗಿದ್ದು, ಸಲ್ಲಿಕೆಯಾಗಿರುವ ಆಕ್ಷೇಪಣೆಗಳು ಪರಿಶೀಲನೆಯಲ್ಲಿರುತ್ತವೆ. |

| | | |
|---|---|---|
| 2 | ಕಾರ್ಯದರ್ಶಿ ಗ್ರೇಡ್-1 ವೃಂದದಿಂದ ಪಿಡಿಒ ವೃಂದಕ್ಕೆ ಈಗಿರುವ ಮುಂಬಡ್ತಿ ಅನುಪಾತವನ್ನು ಶೇಕಡ 35 ರಿಂದ 60ಕ್ಕೆ ಹೆಚ್ಚಿಸುವ ಬಗ್ಗೆ. (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ 2014 ನೇ ಮತ್ತು 2018 ನೇ ಸಾಲಿನಲ್ಲಿ ನೇರ ನೇಮಕಾತಿ ಹೊಂದಿರುವ ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಮತ್ತು ಕಾರ್ಯದರ್ಶಿ ಗ್ರೇಡ್ -1 ವೃಂದದ ಸಮಾನ ವಯಸ್ಕರು ಸೇವೆಗೆ ಸೇರಿರುವುದರಿಂದ ಮುಂಬಡ್ತಿಯ ಅವಕಾಶಗಳು ಕಡಿಮೆಯಾಗಿರುತ್ತದೆ) | ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಮಿತಿಯಲ್ಲಿ ಪರಿಶೀಲನೆಯಲ್ಲಿರುತ್ತದೆ. |

## ಗ್ರೇಡ್-2 ಕಾರ್ಯದರ್ಶಿಗಳ ಬೇಡಿಕೆಗಳು

| | | |
|---|---|---|
| 1 | ಗ್ರೇಡ್-2 ಕಾರ್ಯದರ್ಶಿ ಹುದ್ದೆಯಿಂದ ಗ್ರೇಡ್-1 ಕಾರ್ಯದರ್ಶಿ ಹುದ್ದೆಗೆ ಕಳೆದ 12 ರಿಂದ 14 ವರ್ಷಗಳ ಕಾಲ ಬಡ್ತಿ ಇಲ್ಲದೆ ಕಾರ್ಯ ನಿರ್ವಹಿಸುತ್ತಿದ್ದು, ಗ್ರೇಡ್-2 ಕಾರ್ಯದರ್ಶಿಗಳಿಗೆ ನೇರ ನೇಮಕಾತಿ ಕೋಟಾದಡಿ ಒಂದು ಬಾರಿ ಏಕಕಾಲದಲ್ಲಿ ಬಡ್ತಿ ನೀಡುವುದು. | ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |
| 2 | ಕಾರ್ಯದರ್ಶಿ ಗ್ರೇಡ್-1 ಹುದ್ದೆಗೆ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿ ಮಾಡುವ ದಿನಾಂಕ: 15.07.2023 ರ ಆದೇಶವನ್ನು ಕೈಬಿಟ್ಟು ಹಿಂದಿನಂತೆ ಜಿಲ್ಲಾ ಮಟ್ಟದಲ್ಲಿ ಜೇಷ್ಠತ ಪಟ್ಟಿಯನ್ನು ಮಾಡುವುದು. | ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |
| 3 | ಗ್ರೇಡ್-2 ಕಾರ್ಯದರ್ಶಿ ಹುದ್ದೆಯಿಂದ ಗ್ರೇಡ್-1 ಕಾರ್ಯದರ್ಶಿ ಹುದ್ದೆಗೆ ಬಡ್ತಿ ಶೇ.35 ರಷ್ಟಿದ್ದು ಅದನ್ನು ಶೇ.80 ಕ್ಕೆ ಹೆಚ್ಚಿಸಬೇಕು. | ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಮಿತಿಯಲ್ಲಿ ಪರಿಶೀಲನೆಯಲ್ಲಿದೆ. |
| 4 | 5000 ಕ್ಕಿಂತ ಹೆಚ್ಚಿಗೆ ಇರುವ ಗ್ರಾಮ ಪಂಚಾಯತಿಗಳನ್ನ ಗ್ರೇಡ್-1 ಪಂಚಾಯತಿ ಅಂತಾ ಮೇಲ್ದರ್ಜೆಗೇರಿಸಬೇಕು. | ಪರಿಶೀಲನೆಯಲ್ಲಿರುತ್ತದೆ. |
| 5 | ಈ ಹಿಂದೆ ಬಿಲ್ ಕಲೆಕ್ಟರ್ ಹುದ್ದೆಯಿಂದ ಕಾರ್ಯದರ್ಶಿ ಹುದ್ದೆಗೆ ಮುಂಬಡ್ತಿ ಹೊಂದಿದವರಿಗೆ ಪಿಂಚಣಿ ಯೋಜನೆಗೆ ಒಳಪಡಿಸಬೇಕು. | ಈಗಾಗಲೇ ದಿನಾಂಕ:01.04.2006 ಕ್ಕಿಂತ ಹಿಂದೆ ನೇಮಕಾತಿ ಹೊಂದಿದ್ದಲ್ಲಿ ನೌಕರರಿಗೆ ಹಳೆಯ ಪಿಂಚಣಿ ಯೋಜನೆ ಅನ್ವಯವಾಗುತ್ತದೆ ಮತ್ತು ದಿನಾಂಕ:01.04.2006 ರ ನಂತರ ನೇಮಕಾತಿ ಹೊಂದಿದ್ದಲ್ಲಿ ಹೊಸ ಪಿಂಚಣಿ ಯೋಜನೆಯ ವ್ಯಾಪ್ತಿಗೆ ಒಳಪಟ್ಟಿರುತ್ತಾರೆ. |

| | | |
|---|---|---|
| 6 | ಗ್ರೇಡ-1 ಕಾರ್ಯದರ್ಶಿ ಹುದ್ದೆಗೆ ಒಂದು ಬಾರಿ ಜಿಲ್ಲಾ ಮಟ್ಟದಲ್ಲಿ ಪದೋನ್ನತಿ ನೀಡಬೇಕು. | ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |
| 7 | ಗ್ರೇಡ-2 ಕಾರ್ಯದರ್ಶಿಗಳಿಗೆ (ಮೂಲ ಪಂಚಾಯತಿನಲ್ಲಿ ಖಾಲಿ ಇರುವ ಪಂ.ಅ.ಅಗಳ ಪ್ರಭಾರ ಕೊಡಿಸಲು ಆದೇಶ ಮಾಡಿಸಬೇಕು) | ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 68 ರಂತೆ ಪ್ರಭಾರ ವಹಿಸಲು ಅವಕಾಶವಿರುವುದಿಲ್ಲ. ಪಿ.ಡಿ.ಒ ಪ್ರಭಾರ ಕುರಿತು ದಿ:23.11.2018 ರಂದು ಸರ್ಕಾರದಿಂದ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ. |
| 8 | ಗ್ರೇಡ-2 ಕಾರ್ಯದರ್ಶಿ ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಜೇಷ್ಠತಾ ಪಟ್ಟಿನ್ನು ಜಿಲ್ಲಾ ಮಟ್ಟದಲ್ಲಿ ಒಂದೇ ಜೇಷ್ಠತಾ ಪಟ್ಟಿಯನ್ನಾಗಿ ಮಾಡುವ ಬಗ್ಗೆ. | ಡಿಪಿಎಆರ್ ನಿವೃತ್ತ ಅಧಿಕಾರಿಗಳ ಸೇವೆಯನ್ನು ಪಡೆಯಲಾಗಿದ್ದು ಪರಿಶೀಲನೆಯಲ್ಲಿದೆ. |

**<u>ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಬೇಡಿಕೆ:</u>**

| ಕ್ರ.ಸಂ | ಬೇಡಿಕೆ | |
|---|---|---|
| 1 | ಹಾಲಿ ಇರುವ ಎಲ್ಲಾ ಗ್ರಾಪಂ ಗಳಿಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಹುದ್ದೆ ಸೃಜನೆ ಮಾಡುವುದು.<br>ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ದ್ವಿತೀಯ ದರ್ಜೆ ಲೆಕ್ಕ ಸಹಾಯಕರನ್ನು ಪ್ರಥಮ ದರ್ಜೆ ಲೆಕ್ಕ ಸಹಾಯಕರಾಗಿ ಗ್ರೇಡ್ 1 ಗ್ರಾಪಂ ಗಳಲ್ಲಿಯೇ ಮುಂಬಡ್ತಿ ನೀಡುವುದು. | ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾನಿಲಯ, ಗದಗ ವತಿಯಿಂದ ನಡೆಸಲಾದ ಅಧ್ಯಯನದ ವರದಿಯನ್ನು ಆಯುಕ್ತರು, ಪಂಚಾಯತ್ ರಾಜ್ ರವರಿಗೆ ಸಲ್ಲಿಸಲಾಗಿರುತ್ತದೆ. ಆಯುಕ್ತರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಮಿತಿಯಲ್ಲಿ ಈ ಅಧ್ಯಯನ ವರದಿಯು ಪರಿಶೀಲನೆಯಲ್ಲಿರುತ್ತದೆ. |
| 2 | ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಗಳಲ್ಲಿ ಖಾಲಿ ಇರುವ ಪ್ರಥಮ ದರ್ಜೆ ಲೆಕ್ಕ ಸಹಾಯಕ ಹುದ್ದೆಗಳಿಗೆ ಗ್ರಾಮ ಪಂಚಾಯತಿಗಳಲ್ಲಿ ಸುಮಾರು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ ದ್ವಿತೀಯ ದರ್ಜೆ ಲೆಕ್ಕ ಸಹಾಯಕರನ್ನು ಬಡ್ತಿಗೆ ಪರಿಗಣಿಸುವುದು. | ಪರಿಶೀಲಿಸಲಾಗುವುದು. |
| 3 | ಮುಂಬಡ್ತಿ ಹಾಗೂ ನೇರ ನೇಮಕಾತಿ ಮೂಲಕ ಆಯ್ಕೆಯಾಗಿ ಸುಮಾರು 10 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ ದ್ವಿತೀಯ ದರ್ಜೆ ಲೆಕ್ಕ ಸಹಾಯಕರನ್ನು ಒಂದೇ ಬಾರಿಗೆ ಶೇಕಡ 100% ರಷ್ಟು ಬಡ್ತಿ ನೀಡಿ ಗ್ರೇಡ್-1 ಕಾರ್ಯದರ್ಶಿ ಹುದ್ದೆಗೆ ಪರಿಗಣಿಸುವುದು. | ಒಂದೇ ಬಾರಿಗೆ ಶೇ. 100 ರಷ್ಟು ಬಡ್ತಿಯನ್ನು ನೀಡಲು ಅವಕಾಶವಿರುವುದಿಲ್ಲ. |

| | | |
|---|---|---|
| | | ನಿಯಮಾವಳಿ ಅನುಸಾರ ಖಾಲಿ ಹುದ್ದೆಗಳಿಗೆ ಎದುರಾಗಿ ಬಡ್ತಿ ನೀಡಲಾಗುತ್ತದೆ. |

**ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್, ಕರವಸೂಲಿಗಾರ, ನೀರುಗಂಟಿ, ಜವಾನರು, ಸ್ವಚ್ಛತಾಗಾರರ ಬೇಡಿಕೆಗಳು:**

| ಕ್ರ.ಸಂ | ಬೇಡಿಕೆ | |
|---|---|---|
| 1 | ಗ್ರಾಮ ಪಂಚಾಯಿತಿಯ ಪಂಚ ನೌಕರರುಗಳಿಗೆ ವೇತನ ಶ್ರೇಣಿ ಮತ್ತು ಸೇವಾ ಹಿರಿತನದ ವೇತನವನ್ನು ಜಾರಿ ಮಾಡಿ ಕಾರ್ಮಿಕ ಇಲಾಖೆಯ ವೇತನವನ್ನು ಹೊರತುಪಡಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ವೇತನ ನಿಗದಿಪಡಿಸಿ ನೌಕರರ ಖಾತೆಗಳಿಗೆ ಸಂಬಳವನ್ನು ಪಾವತಿ ಮಾಡುವುದು. | ಪರಿಶೀಲನೆಯಲ್ಲಿರುತ್ತದ. |
| 2 | ಇ.ಎಸ್.ಐ. ಮತ್ತು ಪಿ.ಎಫ್ ಜಾರಿ ಮಾಡುವುದು. | ಪರಿಶೀಲನೆಯಲ್ಲಿರುತ್ತದ. |
| 3 | ಗ್ರಾಪಂ ಸಿಬ್ಬಂದಿಗಳಿಗೆ ಆರೋಗ್ಯ ವಿಮೆಯನ್ನು ಈಗಾಗಲೇ ರೂ. 50,000 ಗಳು ನೀಡುವಂತೆ ಆದೇಶ ಮಾಡಿದ್ದು, ಇದರಿಂದ ಯಾವ ನೌಕರರಿಗೂ ಪ್ರಯೋಜನ ಆಗುವುದಿಲ್ಲ. ಆದ್ದರಿಂದ ಗ್ರಾಮ ಪಂಚಾಯಿತಿಯ ಕುಟುಂಬದವರಿಗೆ 5 ಲಕ್ಷ ಆರೋಗ್ಯ ವಿಮೆಯನ್ನು ಜಾರಿ ಮಾಡುವುದು. | ದಿನಾಂಕ: 19.02.2024 ರಂದು ನಡೆದ ಸಭೆಯಲ್ಲಿ ಚರ್ಚಿಸಿದಂತೆ ಸರ್ಕಾರದ ಆದೇಶ ದಿನಾಂಕ: 10.08.2024 ರಲ್ಲಿ ಗ್ರಾ.ಪಂ ಸಿಬ್ಬಂದಿಗಳಿಗೆ ಗರಿಷ್ಠ ರೂ.50,000/- ಗಳವರೆಗಿನ ವೈದ್ಯಕೀಯ ವೆಚ್ಚವನ್ನು ಜಿಲ್ಲಾ ಪಂಚಾಯತಿಯ ಆಶ್ವಾಸನೆನಿಧಿಯಿಂದ ಭರಿಸಲು ಅವಕಾಶ ನೀಡಿ ಆದೇಶಿಸಲಾಗಿರುತ್ತದೆ. ಈಗಾಗಲೇ ಹೊರಡಿಸಿರುವ ಆದೇಶದ ಉಪಯೋಗ ಮತ್ತು ದುರುಪಯೋಗದ ಬಗ್ಗೆ ಪರಿಶೀಲನೆ ಮಾಡಿ ಕ್ರಮವಹಿಸಲಾಗುವುದು. |
| 4 | ಕರವಸೂಲಿಗಾರ ಮತ್ತು ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ವೃಂದದಿಂದ ಕಾರ್ಯದರ್ಶಿ ಗ್ರೇಡ್ -2 ಮತ್ತು ಎಸ್.ಡಿ.ಎ.ಎ. ಹುದ್ದೆಗಳಿಗೆ ಸರ್ಕಾರದಿಂದ ಸೇವೆ ಒಳಗಿನ ನೇರ ನೇಮಕಾತಿ ಎಂದು ಮಾಡುತ್ತಿದ್ದು, ನೇರ ನೇಮಕಾತಿ ಎಂಬ ಪದವನ್ನು ಕೈ ಬಿಟ್ಟು ಮುಂಬಡ್ತಿ ಎಂಬ ಪದವನ್ನು ಸೇರಿಸಿ ಸರ್ಕಾರದ ಆದೇಶ ಮಾಡುವುದು. | ಪರಿಶೀಲನೆಯಲ್ಲಿರುತ್ತದ. |
| 5 | ಗ್ರಾಮ ಪಂಚಾಯಿತಿಯ ಪಂಚ ನೌಕರರುಗಳಿಗೆ ನಿವೃತ್ತಿ ಉಪಧನವನ್ನು 60 ತಿಂಗಳ ವೇತನದ ಮೊತ್ತವಾಗಿ ಉಪಧನವನ್ನು ನೀಡುವುದು. | ಸರ್ಕಾರದ ಅಧಿಸೂಚನೆ ಸಂಖ್ಯೆ. ಗ್ರಾಅಪ 886 ಗ್ರಾಪಂಕಾ 2016 ದಿನಾಂಕ:29.09.2020 ರಲ್ಲಿ ಗ್ರಾಮ ಪಂಚಾಯತಿ ನೌಕರರು ನಿವೃತ್ತಿ ಹೊಂದಿದಲ್ಲಿ ಅವರಿಗೆ ಸೇವೆ ಸಲ್ಲಿಸಿದ ಪ್ರತಿ ವರ್ಷಕ್ಕೆ 15 ದಿನಗಳ ವೇತನದಂತೆ ಒಟ್ಟು 20 ತಿಂಗಳ ವೇತನ ಮೀರದಂತೆ ನಿವೃತ್ತಿ ಉಪದನ ಪಡೆಯಲು ಅವಕಾಶ ಕಲ್ಪಿಸಲಾಗಿದೆ. |

| | | |
|---|---|---|
| 6 | ಗ್ರಾಮ ಪಂಚಾಯಿತಿಯಲ್ಲಿ ಕ್ಲರ್ಕ್ ಕಂ ಡಿಇಓ, ಬಿಲ್ ಕಲೆಕ್ಟರ್ ಕನಿಷ್ಠ ವಿದ್ಯಾರ್ಹತೆ ಇಲ್ಲದೇ ಕಾರ್ಯನಿರ್ವಹಿಸುತ್ತಿದ್ದು, ಇವರಿಗೆ ಒಂದು ಬಾರಿ ಅನುಮೋದನೆ ನೀಡುವುದು. | ಕನಿಷ್ಠ ವಿದ್ಯಾರ್ಹತೆ ಇಲ್ಲದ ಕಾರಣಕ್ಕೆ ಅನುಮೋದನೆಯಾಗದೇ ಇರುವ ಗ್ರಾಮ ಪಂಚಾಯಿತಿ ಕ್ಲರ್ಕ್ ಕಂ ಡಿಇಓ, ಬಿಲ್ ಕಲೆಕ್ಟರ್ ರವರುಗಳ ಮಾಹಿತಿಯನ್ನು ಪಡೆದು ಕ್ರಮವಹಿಸಲಾಗುವುದು. |
| 7 | ಕಾರ್ಯದರ್ಶಿ ಗ್ರೇಡ್ -2 ಪದೋನ್ನತಿಯನ್ನು ಶೇಕಡ 100% ಹೆಚ್ಚಿಸುವುದು<br><br>ಕಾರ್ಯದರ್ಶಿ ಗ್ರೇಡ್ -1 ಪದೋನ್ನತಿ ಕೋಟವನ್ನು ಶೇಕಡ 70ಕ್ಕೆ ಹೆಚ್ಚಿಸುವುದು. | ನಿಯಮಗಳಲ್ಲಿ ಅವಕಾಶವಿರುವುದಿಲ್ಲ.<br><br>ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಮಿತಿಯಲ್ಲಿ ಪರಿಶೀಲನೆ ಯಲ್ಲಿದೆ. |
| 8 | ಕಾರ್ಯದರ್ಶಿ ಗ್ರೇಡ್ -2 ಹಾಗೂ ಎಸ್ ಡಿ ಎ ಎ ನೇರ ನೇಮಕಾತಿ ಹುದ್ದೆಗಳನ್ನು ಗ್ರಾಮ ಪಂಚಾಯಿತಿಯ ಕರವಸೂಲಿಗಾರರಿಗೆ ಹಾಗೂ ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ರವರಿಗೆ ಒಂದು ಬಾರಿ ಮುಂಬಡ್ತಿಗೆ ಅವಕಾಶ ಕೊಡುವುದು. | ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |
| 9 | ವಾಟರ್ ಮ್ಯಾನ್ / ನೀರುಘಂಟಿಗಳಿಗೆ ವಾರಕ್ಕೆ ಒಂದು ದಿನ ರಜೆಯನ್ನು ನಿಗದಿಪಡಿಸುವುದು. | ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ಸುತ್ತೋಲೆ ಸಂಖ್ಯೆ.ಕೆಪಿಆರ್‌ಸಿ-ಜಿಪಿಎ/ 545/2024 ದಿನಾಂಕ: 19.02.2025 ರಲ್ಲಿ ಗ್ರಾಮ ಪಂಚಾಯಿತಿ ವಾಟರ್ ಆಪರೇಟರ್ ರವರುಗಳಿಗೆ ವಾರದ ರಜೆಗೆ ಅವಕಾಶ ನೀಡಿ ಆದೇಶಿಸಲಾಗಿದೆ. |
| 10 | ಗ್ರಾಮ ಪಂಚಾಯತ ಕರವಸೂಲಿಗಾರರು ಮತ್ತು ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ವೃಂದದಿಂದ ಸೇವೆ ಒಳಗಿನ ನೇರ ನೇಮಕಾತಿಗೆ ಎಸ್.ಡಿ.ಎ.ಎ ವೃಂದಕ್ಕೆ ಪದೋನ್ನತಿ ಹೋದಲು 75% ರಷ್ಟು ಹೆಚ್ಚಳ ಮಾಡುವುದು. | ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಮಿತಿಯಲ್ಲಿ ಪರಿಶೀಲನೆ ಯಲ್ಲಿದೆ. |
| 11 | ಗ್ರಾಮ ಪಂಚಾಯತಿಯಲ್ಲಿ ಕ್ಲರ್ಕ್/ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ಜೊತೆಯಲ್ಲಿ, ಈಗಾಗಲೇ ಕರ್ತವ್ಯ ನಿರ್ವಹಿಸುತ್ತಿರುವ ಹೆಚ್ಚುವರಿ ಡಾಟಾ ಎಂಟ್ರಿ ಆಪರೇಟರ್ ಗಳಿಗೆ ಒಂದು ಬಾರಿಗೆ ಅನುಮೋದನೆ ನೀಡುವುದು. ಅಲ್ಲಿಯವರೆಗೆ ಹೊಸದಾಗಿ ಹೆಚ್ಚುವರಿ ಡಾಟಾ ಎಂಟ್ರಿ ಆಪರೇಟರ್ ಹುದ್ದೆಗೆ ನೇಮಕಾತಿ ಆದೇಶವನ್ನು ನೀಡದೇ ಇರುವುದು. | ಪರಿಶೀಲನೆಯಲ್ಲಿರುತ್ತದೆ. |
| 12 | ಆರ್ಥಿಕ ಇಲಾಖೆಯಲ್ಲಿ ಬಾಕಿ ಇರುವ ಸೇವಾ ಹಿರಿತನ ವೇತನ ಮತ್ತು ವೇತನ ಹೆಚ್ಚಳದ ಆದೇಶ ಜಾರಿ ಮಾಡುವ ಎರಡು ಕಡತ ಅನುಮೋದನೆ ನೀಡುವುದು. | ಪರಿಶೀಲನೆಯಲ್ಲಿರುತ್ತದೆ. |
| 13 | ಕರವಸೂಲಿಗಾರರು ಮತ್ತು ಡಾಟಾ ಎಂಟ್ರಿ ಆಪರೇಟರ್ ರರಿಗೆ ಪ್ರಯಾಣ ಭತ್ಯೆಯನ್ನು ನೀಡುವುದು. | ಪರಿಶೀಲನೆಯಲ್ಲಿರುತ್ತದೆ. |

| | | |
|---|---|---|
| 14 | ನೇಮಕಾತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರ ರೋಷ್ಟರ್ ಸರಿಯಾಗಿ ಪಾಲನೆ ಮಾಡುವುದು. | ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಹೊಸ ರೋಷ್ಟರ್‌ನಂತೆ ನೇಮಕಾತಿ ಮಾಡಲು ಆಯುಕ್ತಾಲಯದಿಂದ ದಿ: 30.10.2024 ರ ಪತ್ರದಲ್ಲಿ ನಿರ್ದೇಶನ ನೀಡಲಾಗಿರುತ್ತದೆ. |
| 15 | ಬ್ಯಾಕ್ ಲಾಗ್ ಹುದ್ದೆಗಳನ್ನು ಭರ್ತಿ ಮಾಡುವುದು. | ಬ್ಯಾಕ್ ಲಾಗ್ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲು ನಿರ್ದೇಶನ ನೀಡಲಾಗಿರುತ್ತದೆ. |
| 16 | ಕರವಸೂಲಿಗಾರರು ಮತ್ತು ಡಿ.ಇ.ಒ ಗಳಿಗೆ ಪ್ರಯಾಣ ಭತ್ಯೆ ನೀಡುವುದು. | ಪರಿಶೀಲನೆಯಲ್ಲಿರುತ್ತದೆ. |

## ಗ್ರಾಮ ಪಂಚಾಯಿತಿ ಸದಸ್ಯರ ಬೇಡಿಕೆಗಳು ಮತ್ತು ತೆಗೆದುಕೊಂಡ ಕ್ರಮಗಳ ವಿವರಗಳು:

| ಕ್ರ. ಸಂ | ಬೇಡಿಕೆ | ತೆಗೆದುಕೊಳ್ಳಲಾದ ಕ್ರಮ |
|---|---|---|
| 1 | ಸಂವಿಧಾನದ ಪ್ರಕರಣ 243-ಜಿ ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 58(4)ರ ಅನ್ವಯ ಗ್ರಾಮದಿ ಪಂಚಾಯತಿಗಳು ಸ್ವಯಂ ಸರ್ಕಾರಗಳಾಗಿ ಕಾರ್ಯನಿರ್ವಹಿಸುವಂತಾಗಲು, ಅಧಿನಿಯಮದ ಪ್ರಕರಣ 58, ಹಾಗೂ 1 ನೇ ಅನುಸೂಚಿಯಲ್ಲಿರುವ ಜವಾಬ್ದಾರಿಗಳನ್ನು ನಿರ್ವಹಿಸಲು ಪ್ರಕರಣ 2(28-ಸಿ) ಅನ್ವಯ ಜವಾಬ್ದಾರಿ ನಕ್ಷೆ ರಚಿಸಬೇಕು. ಜವಾಬ್ದಾರಿ ನಕ್ಷೆಯಲ್ಲಿರುವಂತೆ ಆಯಾ ಜವಾಬ್ದಾರಿಗೆ ಸಂಬಂಧಿಸಿದ ಅಧಿಕಾರ, ಹಣಕಾಸು, ಮಾನವ ಸಂಪನ್ಮೂಲ ಹಾಗೂ ಜವಾಬ್ದಾರಿ ನಿರ್ವಹಿಸುವ ಸ್ವಾತಂತ್ರವನ್ನು ಪಂಚಾಯತಿಗಳಿಗೆ ವರ್ಗಾಯಿಸಬೇಕು ಹಾಗೂ ನೇಮಕವಾಗಿರುವ/ ವರ್ಗಾವಣೆಯಾಗಿ ಬಂದಿರುವ ಅಧಿಕಾರಿಗಳು ಪಂಚಾಯತಿಗಳಿಗೆ ಉತ್ತರದಾಯಿತ್ವ ಹೊಂದಿರುವ ಹಾಗೆ ಕ್ರಮ ಕೈಗೊಳ್ಳಬೇಕು. | ಈ ಕೆಳಕಂಡ ಇಲಾಖೆಗಳ ಕಾರ್ಯಕ್ರಮ/ಚಟುವಟಿಕೆಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸಿ ಅಧಿಸೂಚನೆ ಹೊರಡಿಸಲಾಗಿದೆ.<br>(1) ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ<br>(2) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ<br>(3) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,<br>(4) ಕೃಷಿ ಇಲಾಖೆ<br>(5) ತೋಟಗಾರಿಕೆ ಇಲಾಖೆ<br>(6) ಜಲಾನಯನ ಅಭಿವೃದ್ಧಿ ಇಲಾಖೆ ಮತ್ತು<br>(7) ರೇಷ್ಮೆ ಇಲಾಖೆ<br>(8) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ |
| 2 | ಗ್ರಾಮ ಪಂಚಾಯತಿಗಳು ಸ್ಥಳೀಯ ಸ್ವಯಂ ಸರ್ಕಾರಗಳಾಗಿ ಕಾರ್ಯನಿರ್ವಹಿಸುವಂತಾಗಲು, ಗ್ರಾಮ ಪಂಚಾಯತಿ ಅಧ್ಯಕ್ಷರು ಕಾರ್ಯನಿರ್ವಾಹಕ ಮುಖ್ಯಸ್ಥನಾಗಿ ಕಾರ್ಯನಿರ್ವಹಿಸುವಂತಾಗಲು ಹಾಗೂ ಪಿಡಿಒ ಮುಖ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುವಂತಾಗಲು ಗ್ರಾಮ ಪಂಚಾಯತಿ ಕಛೇರಿ ನಿರ್ವಹಣಾ ಕೈಪಿಡಿಯನ್ನು ರಚಿಸಬೇಕು. | ಕಛೇರಿ ಕಾರ್ಯ ನಿರ್ವಹಣಾ ಕೈಪಿಡಿ ಕರಡು ಪ್ರಕಟಿಸಲಾಗಿದ್ದು, 190ಕ್ಕೂ ಹೆಚ್ಚು ಆಕ್ಷೇಪಣೆಗಳು ಸಲ್ಲಿಕೆಯಾಗಿರುತ್ತವೆ. ಕಛೇರಿ ಕಾರ್ಯ ನಿರ್ವಹಣಾ ಕೈಪಿಡಿ ಅಂತಿಮಗೊಳಿಸಲು ರಚಿಸಲಾದ ಸಮಿತಿಯು ಆಕ್ಷೇಪಣೆಗಳನ್ನು ಪರಿಶೀಲಿಸುತ್ತಿದ್ದು, ಪರಿಶೀಲನೆಯ ನಂತರ ಅಂತಿಮ ಕೈಪಿಡಿಯನ್ನು ಹೊರಡಿಸಲಾಗುವುದು. |

| | | |
|---|---|---|
| 3 | ಗ್ರಾಮ ಪಂಚಾಯತಿಯ ಸ್ಥಾಯಿ ಸಮಿತಿಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುವಂತಾಗಲು ನಿಯಮಗಳನ್ನು ರೂಪಿಸಬೇಕು. | ಗ್ರಾಮ ಪಂಚಾಯತಿ ಸ್ಥಾಯಿ ಸಮಿತಿಗಳ ಕರಡು ನಿಯಮಗಳನ್ನು ರೂಪಿಸಲಾಗಿದ್ದು, ಅನುಮೋದನೆ ಹಂತದಲ್ಲಿದೆ. |
| 4 | ಗ್ರಾಮ ಪಂಚಾಯತಿ ಹಂತದ ಕೆ.ಡಿ.ಪಿ ಸಭೆಗಳು ಯಶಸ್ವಿಯಾಗಿ ನಡೆಯುವಂತಾಗಲು, ಎಲ್ಲಾ ಇಲಾಖೆಗಳ ಗ್ರಾಮ ಪಂಚಾಯತಿ ಹಂತದ ಅಧಿಕಾರಿಗಳು ಭಾಗವಹಿಸುವುದನ್ನು ಖಾತ್ರಿಗೊಳಿಸಲು ಕೆಡಿಪಿ ಸಭೆಗಳನ್ನು ಶಾಸನಬದ್ಧಗೊಳಿಸಬೇಕು. | ಕೆಡಿಪಿ ಸಭೆಗಳನ್ನು ಶಾಸನಬದ್ಧಗೊಳಿಸಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಗೆ ಸಮಗ್ರವಾಗಿ ತಿದ್ದುಪಡಿ ತರುವ ಪ್ರಕ್ರಿಯೆ ಪ್ರಗತಿಯಲ್ಲಿದೆ. |
| 5 | ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರನ್ನು ರಾಜ್ಯ ಶಿಷ್ಟಾಚಾರದ ವ್ಯಾಪ್ತಿಗೆ ತರಬೇಕು. ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ನಡೆಯುವ ಸರ್ಕಾರದ ಕಾರ್ಯಕ್ರಮಗಳಿಗೆ ಆಹ್ವಾನಿಸಬೇಕು ಹಾಗೂ ಆಹ್ವಾನ ಪತ್ರಿಕೆ ಮತ್ತು ಶಿಲಾಫಲಕಗಳಲ್ಲಿ ಅವರ ಹೆಸರುಗಳನ್ನು ಮುದ್ರಿಸಬೇಕು. ವಿಧಾನಸೌಧ ಹಾಗೂ ಇತರೆ ಸರ್ಕಾರಿ ಕಛೇರಿಗಳಲ್ಲಿ, ಟೋಲ್‌ಗಳಲ್ಲಿ ಮುಕ್ತ ಪ್ರವೇಶಕ್ಕೆ ಅವಕಾಶ ಮಾಡಿಕೊಡಬೇಕು. | ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ನಡೆಯುವ ಸರ್ಕಾರದ ಸಭೆ ಸಮಾರಂಭಗಳ ಆಯೋಜನೆಯಲ್ಲಿ ಪಾಲಿಸಬೇಕಾದ ಶಿಷ್ಟಾಚಾರ ಕುರಿತು ಪರಿಶೀಲನೆಯಲ್ಲಿದೆ. |
| 6 | ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರುಗಳಿಗೆ ಮಾಸಿಕ ಗೌರವಧನವನ್ನು ಕೇರಳ ರಾಜ್ಯದಲ್ಲಿರುವಂತೆ ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ 15,000 ರೂಗಳು, ಉಪಾಧ್ಯಕ್ಷರಿಗೆ 12,000 ರೂಗಳು ಹಾಗೂ ಸದಸ್ಯರಿಗೆ 10,000 ರೂಗಳಿಗೆ ಹೆಚ್ಚಿಸಬೇಕು ಎಂದು ಕೋರಿದರು. ಜೊತೆಗೆ ಪಿಂಚಣಿ ನೀಡುವ ವ್ಯವಸ್ಥೆ ಜಾರಿಗೊಳಿಸಬೇಕು, ಉಪವೇಶನ ಶುಲ್ಕವನ್ನು 500 ರೂಗಳಿಗೆ ಹೆಚ್ಚಿಸಬೇಕು, ಗ್ರಾಮ ಪಂಚಾಯತಿ ಸದಸ್ಯರಿಗೆ ಜನರ ಕೆಲಸಗಳಿಗಾಗಿ ಓಡಾಡಲು ಉಚಿತ ಬಸ್ ಪಾಸ್ ವ್ಯವಸ್ಥೆ ನೀಡಬೇಕು ಮತ್ತು ಆರೋಗ್ಯ ವಿಮೆ ವ್ಯವಸ್ಥೆ ಮಾಡಬೇಕು. | 1. ಸರ್ಕಾರದ ಆದೇಶ ಸಂ: ಗ್ರಾಅಪಂ 126 ಜಿಪಿಎಸ್ 2022 ದಿನಾಂಕ:18.12.2022 ರನ್ವಯ ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ ರೂ.3000/- ಗಳಿಂದ ರೂ.6000/- ಗಳಿಗೆ, ಉಪಾಧ್ಯಕ್ಷರಿಗೆ ರೂ.2000/- ಗಳಿಂದ ರೂ.4000/- ಗಳಿಗೆ ಮತ್ತು ಸದಸ್ಯರಿಗೆ ರೂ.1000/- ಗಳಿಂದ ರೂ.2000/-ಗಳಿಗೆ ಹೆಚ್ಚಿಸಿ ಆದೇಶಿಸಲಾಗಿರುತ್ತದೆ.<br>2. ಪ್ರಸ್ತುತ ನೀಡಲಾಗುತ್ತಿರುವ ಉಪವೇಶನ ಶುಲ್ಕವನ್ನು ₹ 300/- ಗಳಿಂದ ₹ 350/- ಗಳಿಗೆ ಹೆಚ್ಚಿಸಿ ದಿನಾಂಕ:16-01-2025ರಂದು ಆದೇಶ ಹೊರಡಿಸಲಾಗಿದೆ.<br>3. ಗ್ರಾಮ ಪಂಚಾಯತಿಗಳ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಸದಸ್ಯರುಗಳು ಗ್ರಾಮ ಪಂಚಾಯತಿಗೆ ಸಂಬಂಧಿಸಿದ ಕೆಲಸಗಳ ನಿಮಿತ್ತ ಗ್ರಾಮ ಪಂಚಾಯತಿ ವ್ಯಾಪ್ತಿಯಿಂದ ಹೊರಗಡೆ ಪ್ರಯಾಣ ಮಾಡಿದಾಗ ಅವರುಗಳಿಗೆ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆಗಳನ್ನು ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರುಗಳ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ) ನಿಯಮಗಳು, 1994ರನ್ವಯ ಇತ್ತೀಚಿನ ಪ್ರಯಾಣ ದರಗಳನ್ವಯ ಪಾವತಿಸಲಾಗುತ್ತಿದೆ. |

| | | |
|---|---|---|
| | | 4. ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳಿಗೆ ವಿಧಾನಸೌಧ ಹಾಗೂ ವಿಕಾಸಸೌಧಗಳಿಗೆ ಪ್ರವೇಶಿಸಲು ಅನುಕೂಲವಾಗುವಂತೆ ಗುರುತಿನ ಚೀಟಿ (ID Card) ವಿತರಿಸುವ ಕುರಿತು ಕ್ರಮವಹಿಸಲಾಗುವುದು.<br>5. ಗ್ರಾಮ ಪಂಚಾಯತಿ ಚುನಾಯಿತ ಪ್ರತಿನಿಧಿಗಳು ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಡಿ ಆರೋಗ್ಯ ಶುಶ್ರೂಷೆ ಸವಲತ್ತುಗಳನ್ನು ಪಡೆಯಬಹುದಾಗಿರುತ್ತದೆ.<br>6. ಪ್ರಧಾನ ಮಂತ್ರಿ ಜೀವನ್ ಜ್ಯೋತಿ ವಿಮಾ ಯೋಜನೆ, ಪ್ರಧಾನ ಮಂತ್ರಿ ಸುರಕ್ಷಾ ವಿಮಾ ಯೋಜನೆಗಳಲ್ಲಿ ವಿಮಾ ಸೌಲಭ್ಯ ಪಡೆಯಬಹುದಾಗಿದೆ. |
| 7 | ಮೇಲಿನ ಹಂತದ ಅಧಿಕಾರಿಗಳು ಗ್ರಾಮ ಪಂಚಾಯತಿಗಳನ್ನು ತಮ್ಮ ಕೆಳಗಿನ ಶಾಖಾ ಕಚೇರಿಗಳಂತೆ ನಡೆಸಿಕೊಳ್ಳುವುದನ್ನು ನಿಲ್ಲಿಸಬೇಕು. | ಗ್ರಾಮ ಪಂಚಾಯತಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳನ್ನು ಗೌರವಯುತವಾಗಿ ನಡೆಸಿಕೊಳ್ಳುವ ಬಗ್ಗೆ ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ದಿನಾಂಕ:02-01-2025 ರಂದು ನಿರ್ದೇಶನ ನೀಡಲಾಗಿದೆ. |
| 8 | ಗ್ರಾಮ ಪಂಚಾಯತಿಗಳು ನಿರ್ವಹಣೆಮಾಡುವ ಬೀದಿ ದೀಪಗಳು ಹಾಗೂ ಕುಡಿಯುವ ನೀರು ಸರಬರಾಜು ಘಟಕಗಳಿಗೆ ವಿದ್ಯುತ್ ಸರಬರಾಜು ಕಂಪನಿಗಳು ಮೀಟರ್ ಅಳವಡಿಸದೆ ಮತ್ತು ಎನರ್ಜಿ ಆಡಿಟಿಂಗ್ ಮಾಡದ ಸರಾಸರಿ ಆಧಾರದ ಮೇಲೆ ವಿದ್ಯುತ್ ಬಿಲ್ ನೀಡುತ್ತಿದ್ದು, ಸರಿಯಾದ ಲೆಕ್ಕವಿಲ್ಲದೆ ವಿದ್ಯುತ್ ಬಿಲ್ ಕಟ್ಟಲಾಗುತ್ತಿದೆ. ಅಲ್ಲದೆ ದಿನಾಂಕ 31-3-2015ರ ವರೆಗೆ ರಾಜ್ಯ ಸರ್ಕಾರ ಗ್ರಾಮ ಪಂಚಾಯತಿಗಳ ವಿದುತ್ ಬಿಲ್ ಬಾಕಿಯನ್ನು ಪಂಚಾಯತಿಗಳ ಪರವಾಗಿ ಕಟ್ಟಿರುವುದಾಗಿ ತಿಳಿಸಿದ್ದರು. ವಿದ್ಯುತ್ ಕಂಪನಿಗಳು ಹಳೆಯ ಬಾಕಿಯನ್ನು ಬಿಲ್ ಗಳಲ್ಲಿ ತೋರಿಸುತ್ತಲೇ ಬರುತ್ತಿವೆ. ಕೂಡಲೆ ಸರ್ಕಾರ ಮಧ್ಯ ಪ್ರವೇಶಿಸಿ ಸಮಸ್ಯೆಯನ್ನು ಬಗೆಹರಿಸಬೇಕು ವಿತರಣೆಯಲ್ಲಾಗುತ್ತಿರುವ ವಿದ್ಯುತ್ ಸೋರಿಕೆಯಿಂದ ಉಂಟಾಗುತ್ತಿರುವ ಆದಾಯದ ಕೊರತೆಯನ್ನು ಗ್ರಾಮ ಪಂಚಾಯತಿಗಳ ಬಳಕೆಯ ಮೇಲೆ ಹಾಕುತ್ತಿದ್ದು. ಇದು ನಿಲ್ಲಬೇಕು. ಕೃಷಿ ಉಪಯೋಗಕ್ಕಾಗಿ ಉಚಿತ ವಿದ್ಯುತ್ ನೀಡಿ, ಗೃಹಬಳಕೆಗೆ ರಿಯಾಯತಿ ನೀಡಿರುವ ಸರ್ಕಾರ/ ವಿದ್ಯುತ್ ಕಂಪನಿಗಳು, ಗ್ರಾಮೀಣ ಕುಡಿಯುವ ನೀರಿನ ಯೋಜನೆಗೆ ವಾಣಿಜ್ಯ ದರ ವಿಧಿಸುತ್ತಿರುವುದು ಪಂಚಾಯತಿಗಳನ್ನು ಆರ್ಥಿಕ ಸಂಕಷ್ಟಕ್ಕೆ | ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೀದಿ ದೀಪಗಳ ಹಾಗೂ ಕುಡಿಯುವ ನೀರಿನ ಸ್ಥಾವರಗಳ ವಿದ್ಯುತ್ ಬಿಲ್‌ನ್ನು ಪಾವತಿಸಲು ಬೆಸ್ಕಾಂ ವಿಭಾಗದಲ್ಲಿ "ಇ-ಬೆಳಕು" ತಂತ್ರಾಂಶವನ್ನು ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ/161/ಇ-ಆಡಳಿತ/2021, ದಿನಾಂಕ:03.06.2022 ರಲ್ಲಿ ಜಾರಿಗೊಳಿಸಿದ್ದು, ಬಿಲ್‌ಗಳ ಸಮನ್ವಯತೆ, ಬಿಲ್‌ಗಳ ಪಾವತಿ, ನಿಷ್ಕ್ರಿಯ ಸ್ಥಾವರಗಳ ಸಂಪರ್ಕ ಕಡಿತ, ಸ್ಥಾವರಗಳ ಮೀಟರ್ ಮಾಪನಗಳಂತಹ ಕಾರ್ಯಗಳನ್ನು ಸದರಿ ತಂತ್ರಾಂಶದ ಮೂಲಕ ನಿರ್ವಹಿಸಲಾಗುತ್ತಿದೆ.<br>"ಇ-ಬೆಳಕು" ತಂತ್ರಾಂಶವನ್ನು ಇನ್ನುಳಿದ ಮೂರು ವಿಭಾಗಗಳಿಗೆ ವಿಸ್ತರಿಸುವ ಬಗ್ಗೆ ಇಂಧನ ಇಲಾಖೆಯೊಂದಿಗೆ ಸಮಾಲೋಚಿಸಲಾಗಿದ್ದು, ತಂತ್ರಾಂಶದಲ್ಲಿ ತಾಂತ್ರಿಕ ಮಾರ್ಪಾಡುಗಳನ್ನು ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ನಂತರದಲ್ಲಿ ತಂತ್ರಾಂಶವನ್ನು ಉಳಿದ ಮೂರು ವಿಭಾಗಗಳಿಗೂ ವಿಸ್ತರಿಸಲು ಕ್ರಮವಹಿಸಲಾಗುವುದು. |

| | | |
|---|---|---|
| | ದೂಡಿದೆ: ಆದ್ದರಿಂದ ಗ್ರಾಮೀಣ ಕುಡಿಯುವ ನೀರು ಯೋಜನೆಗೂ ರಿಯಾಯತಿ ದರದಲ್ಲಿ ವಿದ್ಯುತ್ ನೀಡಬೇಕು. | CEGIS ಸಂಸ್ಥೆಯು ಅತಿ ಹೆಚ್ಚು ವಿದ್ಯುತ್ ಬಿಲ್ ಹೊಂದಿರುವ ಮತ್ತು ಅತಿ ಕಡಿಮೆ ವಿದ್ಯುತ್ ಬಿಲ್ ಹೊಂದಿರುವ ತಲಾ ಒಂದು ಗ್ರಾಮ ಪಂಚಾಯತಿಗಳಲ್ಲಿ ವಿದ್ಯುತ್ ಬಿಲ್ ಬಾಕಿ ಕುರಿತು ಅಧ್ಯಯನ ನಡೆಸಿ ಮಧ್ಯಂತರ ವರದಿ ಸಲ್ಲಿಸಿರುತ್ತದೆ. ವರದಿಯು ಹೆಸ್ಕಾಂ ಪರಿಶೀಲನೆಯಲ್ಲಿರುತ್ತದೆ.<br>ವಿದ್ಯುತ್ ಶುಲ್ಕ ಪಾವತಿಸಲು ಬಾಕಿ ಇರುವ ಗ್ರಾಮ ಪಂಚಾಯಿತಿಗಳಲ್ಲಿನ ಕುಡಿಯುವ ನೀರು, ಬೀದಿ ದೀಪಗಳ ವಿದ್ಯುತ್ ಸಂಪರ್ಕ ಕಡಿತಗೊಳಿಸುತ್ತಿರುವ ಕುರಿತಂತೆ ಇಂಧನ ಇಲಾಖೆಯೊಂದಿಗೆ ಚರ್ಚಿಸಿ ಸಂಪರ್ಕ ಕಡಿತಗೊಳಿಸದಂತೆ ಕ್ರಮವಹಿಸಲಾಗುವುದು. |
| 9 | ಪಂಚಾಯತ್ ರಾಜ್ ಸಂಸ್ಥೆಗಳು ರಾಜ್ಯ ಸರ್ಕಾರದ ಲಾಂಛನವನ್ನು ಬಳಸುವಂತಿಲ್ಲವಾದ್ದರಿಂದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅರ್ಥಪೂರ್ಣವಾದಂತಹ ಪ್ರತ್ಯೇಕ ಲಾಂಛನವನ್ನು ಸೃಜಿಸಿ ನೀಡಬೇಕು. | ಪ್ರತ್ಯೇಕ ಲಾಂಛನದ ವಿನ್ಯಾಸವು ಸರ್ಕಾರದಿಂದ ಅನುಮೋದನೆಯಾಗಿದ್ದು, ಲಾಂಛನ ಉಪಯೋಗಿಸುವ ಕುರಿತು ಮಾರ್ಗಸೂಚಿಗಳನ್ನು ಸಿದ್ಧಪಡಿಸಲಾಗಿದ್ದು ಅನುಮೋದನೆ ಹಂತದಲ್ಲಿರುತ್ತದೆ. |
| 10 | ಪಂಚಾಯತ್ ಆಡಳಿತ ಸೇವೆ ಜಾರಿಗೊಳಿಸಬೇಕು. | ಸರ್ಕಾರದ ಪರಿಶೀಲನೆಯಲ್ಲಿದೆ. |
| 11 | ಗ್ರಾಮ ಪಂಚಾಯಿತಿಯ ನಿಧಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಕಾಯ್ದಿರಿಸಿದ ಶೇ.25ರ ಅನುದಾನದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ನೀಡುವ ಸೌಲಭ್ಯಗಳಲ್ಲಿ ನಿಗದಿಪಡಿಸಿರುವ ಘಟಕ ವೆಚ್ಚ ಹೆಚ್ಚಿಸಬೇಕು. | ಗ್ರಾಮ ಪಂಚಾಯಿತಿಯ ನಿಧಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಕಾಯ್ದಿರಿಸಿದ ಶೇ.25ರ ಅನುದಾನದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ನೀಡುವ ಸೌಲಭ್ಯಗಳ ಘಟಕ ವೆಚ್ಚ ಹೆಚ್ಚಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. |

ನಿರ್ದೇಶಕರು (ಆಡಳಿತ-1)
ಪಂಚಾಯತ್ ರಾಜ್ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಬೆಂಗಳೂರು